# ಸಂಕೇತಗಳ ಮರೆಯಲ್ಲಿ ಧರ್ಮಸೂಕ್ಷ್ಮ

**ಸತ್ಯಾಗಾಲಂ ಪಾರ್ಥಸಾರಥಿ**

ಶ್ರೀಪಾರ್ಥಸಾರಥಿಯವರು ಶ್ರೀರಾಮಕೃಷ್ಣ ವಿದ್ಯಾಶಾಲೆಯ ನಿವೃತ್ತ ಕನ್ನಡ ಪ್ರಾಧ್ಯಾಪಕರು. ಧಾರ್ಮಿಕ ಆಚರಣೆಗಳ ಅಡಗಿರುವ ಸತ್ಯವನ್ನು ಅರಿತು ಧರ್ಮವನ್ನು ಅನುಸರಿಸಬೇಕು, ಇಲ್ಲದಿದ್ದರೆ ಅವು ಗೊಡ್ಡು ಆಚರಣೆಗಳಾಗುತ್ತವೆ ಎನ್ನುತ್ತಾರೆ ಅವರು.

**ಪ್ರಪಂಚದ** ಎಲ್ಲ ಧಾರ್ಮಿಕ ಪದ್ಧತಿಗಳ ಆಚರಣೆಯಲ್ಲೂ ಕೆಲವು ಸಾಂಕೇತಿಕ ಅಂಶಗಳನ್ನು ಕಾಣುತ್ತೇವೆ. ಅಂತೆಯೇ ಹಿಂದೂ ಧರ್ಮಾಚರಣೆಗಳಲ್ಲೂ ಈ ಅಂಶಗಳನ್ನು ಕಾಣಬಹುದು. ಧರ್ಮದ ಸಾರವನ್ನು ಗ್ರಹಿಸಬಲ್ಲವರು ಈ ಬಗೆಯ ಸಾಂಕೇತಿಕ ಅಂಶಗಳನ್ನು ಕಡೆಗಣಿಸುವಂತಿಲ್ಲ. ಇವನ್ನು ಕುರಿತು ಚಿಂತಿಸದಿದ್ದರೆ, ಹಿಂದೂಧರ್ಮದ ಕೆಲವು ಆಚರಣೆಗಳು ಹಾಸ್ಯಾಸ್ಪದವೂ, ಅರ್ಥಹೀನವೂ ಆಗಿ ತೋರುವುವು. ಈ ಸಂಕೇತಗಳ ಅಂತರಾರ್ಥವನ್ನು ಅರಿಯುವುದರಿಂದ, ಬಾಹ್ಯನೋಟಕ್ಕೆ ಅಸತ್ಯವೆಂದೋ, ಮೌಢ್ಯವೆಂದೋ ತೋರುವ ಅನೇಕ ಪದ್ಧತಿಗಳ ಹಿನ್ನೆಲೆಯಲ್ಲಿ ಸುಪ್ತವಾಗಿರುವ ಧಾರ್ಮಿಕ ಸತ್ಯವು ಪ್ರಕಟವಾಗುವುದು.

> ಶುದ್ಧ ಭಾವದ ಗುಡಿಯಲ್ಲಿ, ಶುದ್ಧ ಚಾರಿತ್ರ್ಯದ ಮೂಲಕ ಶುದ್ಧಾತ್ಮನನ್ನು ಪೂಜಿಸುವುದೇ ಶ್ರೇಷ್ಠ ಪೂಜೆ.

ಹಿಂದೂಗಳು ದೇವಾಲಯಗಳಿಗೆ ಹೋಗುವುದು ನಿತ್ಯಜೀವನದಲ್ಲಿ ಒಂದು ಸಾಮಾನ್ಯ ಪದ್ಧತಿ. ಇದನ್ನೇ ನಿದರ್ಶನವಾಗಿಟ್ಟುಕೊಂಡು ಚಿಂತನ-ಮಂಥನ ಮಾಡುವುದರಿಂದ ಈ ಪದ್ಧತಿಯ ಹಿಂದೆ ಅಗೋಚರವಾಗಿರುವ ಧರ್ಮಸೂಕ್ಷ್ಮವನ್ನು ತಿಳಿಯಬಹುದು.

ಇಂದಿಗೂ ಅತಿ ಪ್ರಾಚೀನವೂ ಅಷ್ಟೇ ಪವಿತ್ರವೂ ಆಗಿರುವ ತೀರ್ಥಕ್ಷೇತ್ರಗಳ ದೇವಮಂದಿರಗಳಿಗೆ ಹೋದಾಗ ಕಾಣುವುದು ಕತ್ತಲೆ ಆವರಿಸಿದ ಗರ್ಭಗೃಹ. ಮಂದವಾದ ಬೆಳಕು ಬೀರುವ ಹಣತೆಯ ವಿನಾ, ಆಧುನಿಕ ರೀತಿಯ ದೀಪದ ವ್ಯವಸ್ಥೆ ಇರುವುದಿಲ್ಲ. ಅಂಥ ವ್ಯವಸ್ಥೆ ಗರ್ಭಗೃಹದಲ್ಲಿರಬಾರದೆಂಬ ಶಾಸ್ತ್ರನಿಯಮವೂ ಉಂಟು. ಇಂದಿಗೂ ಪ್ರಾಚೀನ ದೇವ ಮಂದಿರಗಳ ಗರ್ಭಗುಡಿಯಲ್ಲಿ ಈ ನಿಬಂಧನೆ ಆಚರಣೆಯಲ್ಲಿದೆ. ಹಾಗಾಗಿ ದೇವಾಲಯಕ್ಕೆ ಬರುವ ಭಕ್ತರಿಗೆ ಗರ್ಭಗೃಹದಲ್ಲಿ ಪ್ರತಿಷ್ಠಾಪಿತವಾಗಿರುವ ಆರಾಧ್ಯಮೂರ್ತಿ ತತ್‌ಕ್ಷಣಕ್ಕೆ ಅಗೋಚರ ಇಲ್ಲವೇ ಅಸ್ಪಷ್ಟ. ಶ್ರದ್ಧಾಭಕ್ತಿಯಿಂದ ತದೇಕಚಿತ್ತದಿಂದ ದೃಷ್ಟಿ ಹರಿಸಿದರೆ, ಗರ್ಭಗುಡಿಯಲ್ಲಿರುವ ಹಣತೆಯ ಮಂದವಾದ ಬೆಳಕಿನಲ್ಲಿ ದರ್ಶನ ಭಾಗ್ಯ ಲಭ್ಯ.

ದೇವಾಲಯಕ್ಕೆ ಬರುವ ಭಕ್ತರು ಪೂಜೆಗಾಗಿ ತರುವ ತೆಂಗಿನಕಾಯಿ ಮತ್ತು ಕರ್ಪೂರವನ್ನು ಪೂಜಾರಿಯ ಕೈಗೆ ಕೊಡುವರು. ಪೂಜಾರಿಯು ಕಾಯಿಯನ್ನು ಒಡೆದು ಎಳನೀರನ್ನು ಸಂಗ್ರಹಿಸಿ ಮಂತ್ರೋಚ್ಚಾರಣೆಯಿಂದ ಕರ್ಪೂರವನ್ನು ಹೊತ್ತಿಸಿ, ದೇವರಿಗೆ ಮಂಗಳಾರತಿಯನ್ನು ಮಾಡುವನು. ಆಗ ಅದುವರೆಗೆ ಕತ್ತಲೆ ಕವಿದಿದ್ದ ಗರ್ಭಗುಡಿಯು ಉರಿಯುವ ಕರ್ಪೂರದ ಜ್ಯೋತಿಯಿಂದ ಬೆಳಗುವುದು. ಆ ಕ್ಷಣದ ಬೆಳಕಿನಲ್ಲಿ ಭಕ್ತರಿಗೆ ಭಗವಂತನ ದರ್ಶನ ಸ್ಪಷ್ಟವಾಗಿ ಆಗುವುದು. ನಂತರ ಪೂಜಾರಿಯು, ಎಳನೀರನ್ನು ತೀರ್ಥವಾಗಿಯೂ, ಒಡೆದ ತೆಂಗಿನ ಕಾಯಿಯನ್ನು ಪ್ರಸಾದವಾಗಿಯೂ ಭಕ್ತರಿಗೆ ಕೊಡುವನು. ಅವರು ಧನ್ಯತೆಯಿಂದ ಸಂತೃಪ್ತರಾಗಿ ದೇವಾಲಯದಿಂದ ನಿರ್ಗಮಿಸುವರು.

ದಿನನಿತ್ಯದಲ್ಲಿ ನಾವು ಕಾಣುವ ಧಾರ್ಮಿಕ ಆಚರಣೆಗಳಲ್ಲಿ ಇದೂ ಒಂದು. ದೇವಾಲಯಗಳಿಗೆ ಹೋಗುವುದು, ಪೂಜೆ ಮಾಡಿಸುವುದು ಇವೆಲ್ಲ ಕೆಲವರಿಗೆ ಅರ್ಥಹೀನವೂ, ಹಾಸ್ಯಾಸ್ಪದವೂ ಆಗಿ ತೋರುವುದು. ಇಂಥ ಸಂಪ್ರದಾಯದಲ್ಲಿ ನಂಬಿಕೆ ಇಲ್ಲದವರಿಗೆ ಈ ಬಗೆಯ ಆಚರಣೆಗಳು ಮೌಢ್ಯವೆಂದು ಕಂಡರೆ ಆಶ್ಚರ್ಯವೇನಿಲ್ಲ. ಆದರೆ ಇಂಥ ಕೆಲವು ಸಂಪ್ರದಾಯಗಳ ಬಗೆಗೆ ವಿಚಾರ ಮಾಡಿ, ಅಂತರಾರ್ಥವನ್ನು ಗ್ರಹಿಸಲು ಯತ್ನಿಸಿದರೆ ಬೂದಿ ಮುಚ್ಚಿದ ಕೆಂಡದಂತಿರುವ ಸತ್ಯಾಂಶವು ಗೋಚರಿಸುವುದು—ಧರ್ಮಸೂಕ್ಷ್ಮದ ಅರಿವಾಗಿ ಅದರಲ್ಲಿ ಶ್ರದ್ಧೆ ಮೂಡುವುದು.

ಈ ಪ್ರಪಂಚವೇ ಒಂದು ದೇವಾಲಯವೆಂದು ತಿಳಿದರೆ ಇಲ್ಲಿ ಜನ್ಮತಾಳಿದ ಮನುಕುಲದವರೆಲ್ಲ ಭಕ್ತರೆಂದು ಭಾವಿಸಬಹುದು. ಮಾನವರನ್ನು ಆವರಿಸಿರುವ ಅಜ್ಞಾನಗರ್ಭಗೃಹವನ್ನು ಆವರಿಸಿದ ಕತ್ತಲೆಯಂತೆ. ಈ ಅಜ್ಞಾನದ ಕತ್ತಲೆಯಿಂದಾಗಿ ಜ್ಞಾನದ ಪ್ರತೀಕವಾದ ದೇವರು ಅಗೋಚರ. ದೇವರ ದರ್ಶನಕ್ಕಾಗಿ ಭಕ್ತರು ದೇವಾಲಯಕ್ಕೆ ಹೋಗುವಂತೆ, ಜ್ಞಾನವನ್ನು ಬಯಸುವವರು ಗುರುವನ್ನು ಅರಸಿ ಹೋಗುವರು. ಆಲಯದಲ್ಲಿ ಪೂಜಾರಿಯು ಭಗವಂತನ ದರ್ಶನವನ್ನು ಮಾಡಿಸುವಂತೆ ಗುರುವು ಆತ್ಮಜ್ಞಾನದ ದರ್ಶನ ನೀಡುವನು.

ನೈವೇದ್ಯಕ್ಕಾಗಿ ಪೂಜಾರಿಯು ತೆಂಗಿನಕಾಯಿಯನ್ನು ಒಡೆಯುವಂತೆ, ಗುರುವು ತನ್ನಲ್ಲಿಗೆ ಬರುವವರಲ್ಲಿರುವ ಅಹಂಕಾರ, ಮಮಕಾರಗಳನ್ನು ನೀಗಿಸುವನು. ಮಾನವರಲ್ಲಿ ಅಡಗಿರುವ ಅಹಂಕಾರವು, ಗಡುಸಾದ ತೆಂಗಿನಕಾಯಿಯಂತೆ. ಕಾಯಿ ಒಡೆದಾಗ ಅದರಿಂದ ಸಿಗುವ ಸಿಹಿಯಾದ ಎಳನೀರು ಶುದ್ಧಜಲ. ಅಂತೆಯೇ ಅಹಂಕಾರ-ಮಮಕಾರಗಳಿಂದ ಬಿಡಲ್ಪಟ್ಟ ಮಾನವರು ಆನಂದಾನುಭವದ ಜಲವನ್ನು ಪಾನ ಮಾಡುವರು. ಕರ್ಪೂರ ಬೆಳಗಿದಾಗ ಭಗವಂತನ

ದರ್ಶನವಾಗುವಂತೆ, ಗುರುವೆಂಬ ಪೂಜಾರಿಯು ತಮ್ಮಲ್ಲಿಗೆ ಬರುವವರ ಕರ್ಮಬಂಧವೆಂಬ ಕರ್ಪೂರವನ್ನು ಜ್ಞಾನದ ಕಿಚ್ಚಿನಿಂದ ಹೊತ್ತಿಸುವನು. ಆದರದು ಕರ್ಪೂರದಂತೆ ಕ್ಷಣಿಕಾಲ ಬೆಳಕು ಹರಿಸಿ ಮಾಯವಾಗುವಂಥದಲ್ಲ, ಚಿನ್ಮಯಾನಂದ ಮೂಡಿಸುವ ಜ್ಞಾನ ಜ್ಯೋತಿಯದು— ಗುರುವಿನ ಪವಿತ್ರ ಸಾನ್ನಿಧ್ಯದಲ್ಲಿ ಸಾಮಾನ್ಯ ಮಾನವನೂ ಪಡೆಯಬಲ್ಲ ಆತ್ಮಜಾಗೃತಿಯ ಪರಾಕಾಷ್ಠೆ. ಕರ್ಪೂರವು ಉರಿದು ಏನೂ ಉಳಿಯದಿರುವಂತೆ ಕರ್ಮಬಂಧವೂ ಸಂಪೂರ್ಣ ನಾಶವಾಗುವುದು.

ಹೀಗೆ, ಗಡುಸಾದ ತೆಂಗಿನಕಾಯಿ, ಅದರೊಳಗಿನ ಅಮೃತ ಸಮಾನವಾದ ಎಳನೀರು, ಘನೀಭೂತವಾದ ಕರ್ಪೂರದೊಳಗಿಂದ ಹೊರಬರುವ ಬೆಳಕಿನ ಶಕ್ತಿ—ಇವುಗಳನ್ನು ಬಳಸಿಕೊಂಡು ಬರುವ ಭಕ್ತರಿಗೆ ಭಗವಂತನ ದರ್ಶನ ಮಾಡಿಸುವ ಪೂಜಾರಿ; ಈ ಅಂಶಗಳನ್ನು ಸಾಂಕೇತಿಕವಾಗಿಟ್ಟುಕೊಂಡು ವಿಚಾರ ಮಾಡೋಣ.

ಮಾನವರಲ್ಲಿ ಗಡುಸಾದ ತೆಂಗಿನಕಾಯಿಯಂತಿರುವ ಅಹಂಕಾರವನ್ನು ನೀಗಿ, ಎಳನೀರಿನಂತಿರುವ ಆನಂದಾನುಭವವೆಂಬ ತೀರ್ಥವನ್ನು ಕೊಟ್ಟು, ಕರ್ಮಬಂಧವೆಂಬ ಕರ್ಪೂರವನ್ನು ಉರಿಸಿ ಜ್ಞಾನದ ದರ್ಶನ ಮಾಡಿಸಬಲ್ಲ ಗುರು ಪೂಜಾರಿಗಿಂತ ಉತ್ತಮ ದೈವ ಪ್ರತಿನಿಧಿಯಲ್ಲವೇ? ಹಿಂದೂ ಧರ್ಮಸಂಸ್ಕೃತಿಯಲ್ಲಿ ಗುರುವಿನ ಸ್ಥಾನದ ಹಿರಿಮೆಗೆ ಈ ನಿದರ್ಶನ ಅರ್ಥಪೂರ್ಣವಾಗಿದೆ.

ಹಿಂದೂಧರ್ಮವೊಂದಲ್ಲದೆ ವಿಶ್ವದ ಎಲ್ಲ ಧರ್ಮಾಚರಣೆಗಳಲ್ಲಿ ಹೊರನೋಟಕ್ಕೆ ಹಾಸ್ಯಾಸ್ಪದವಾಗಿ ತೋರಬಹುದಾದ ಪದ್ಧತಿಗಳ ಬಗೆಗೆ ಚಿಂತನ-ಮಂಥನ ಮಾಡಿದಾಗ, ಕ್ಷೀರಾಬ್ಧಿ ಮಥನದಿಂದ ಅಮೃತ ಲಭ್ಯವಾದಂತೆ, ಅಂತರ್ಗತವಾಗಿರುವ ಸತ್ಯಾಂಶ ಗೋಚರಿಸುತ್ತದೆ. ಚಿನ್ನದ ಗಣಿಯಿಂದ ಹೊರತೆಗೆದ ಅದಿರನ್ನು ಶುದ್ಧಗೊಳಿಸಿ, ಪುಟಕ್ಕಿಟ್ಟಾಗ ಮಾತ್ರ, ಸುವರ್ಣದ ಸಹಜ ಲಕ್ಷಣ ಕಾಣಸಿಗುವುದು. ಅಂತೆಯೇ ಧರ್ಮದ ನೈಜತೆಯ ಅನುಭವಕ್ಕೆ ಶುದ್ಧ ಚಿಂತನೆ ಅಗತ್ಯ.

ಮನದಲ್ಲಿ ಭಕ್ತಿ ಮೂಡಿ ನೆಲೆ ನಿಲ್ಲಲು ಮನಸ್ಸು ನಿರ್ಮಲವಾಗಿರಬೇಕು. ನೈರ್ಮಲ್ಯವಿರುವ ಎಡೆಯಲ್ಲಿ ದೇವನಿರುವನು ಎಂಬ ನುಡಿ ಸತ್ಯ. ಆರಾಧ್ಯದೈವಗಳಿರುವ ದೇವಮಂದಿರಗಳ ಗರ್ಭಗುಡಿ, ಸುಕನಾಸಿ, ಹಜಾರ, ಪ್ರಾಕಾರ ಹೀಗೆ ಪ್ರತಿಯೊಂದು ಭಾಗವೂ ಸದಾಕಾಲ ಶುಚಿಯಾಗಿದ್ದರೆ ದರ್ಶನಾರ್ಥಿಗಳಾಗಿ ಬರುವ ಭಕ್ತರ ಮನಸ್ಸು ನಿರ್ಮಲವೂ ಆನಂದಪೂರ್ಣವೂ ಆಗಿರುತ್ತದೆ. ನಿರ್ಮಲ ಮನಸ್ಸಿರುವೆಡೆ, ಚಿತ್ತ ಶುದ್ಧವಾಗಿದ್ದು ಪೂಜಾದಿ ಬಾಹ್ಯ ಚಟುವಟಿಕೆಗಳಲ್ಲಿ ಏಕಾಗ್ರತೆ ಮೂಡುತ್ತದೆ. ಭಕ್ತಿಯಲ್ಲಿ ಶ್ರದ್ಧೆಯುಂಟಾಗಿ ಉದ್ದೇಶಿತ ಕಾರ್ಯ ಸಫಲವಾಗುತ್ತದೆ.

ದೇವಾಲಯಕ್ಕೆ ಹೋಗುವವರೂ ಶುದ್ಧ ಮನಸ್ಸಿನಿಂದ ಹೋಗಬೇಕು. ಅಲ್ಲಿಯ ಪವಿತ್ರ ಸ್ಪಂದನವನ್ನು ಹೆಚ್ಚಿಸಲು ಪ್ರಯತ್ನಿಸಬೇಕು. ಸ್ನೇಹಿತರು ಸಂಬಂಧಿಕರೊಡನೆ ಕುಳಿತು ಸಾಂಸಾರಿಕ ವಿಷಯಗಳನ್ನು ಮಾತನಾಡುವುದಕ್ಕೆ ದೇವಾಲಯಕ್ಕೆ ಹೋಗಬಾರದು. ಪೂಜಾರಿ ವರ್ಗದವರು, ದೇವಾಲಯದ ಆಡಳಿತ ವರ್ಗದವರು ದೇವಾಲಯವು ಗದ್ದಲದ ಸ್ಥಳವಾಗದಂತೆ ಅಲ್ಲಿ ಶಾಂತ ವಾತಾವರಣವನ್ನು ಉಳಿಸಿಕೊಳ್ಳಲು ಪ್ರಯತ್ನಿಸಬೇಕು. ದೇವಾಲಯವು ತೀರ್ಥ ಪ್ರಸಾದಾದಿಗಳನ್ನು ಮಾರಾಟ ಮಾಡುವ ವ್ಯಾಪಾರ ಸ್ಥಳವಾಗದಂತೆ ನೋಡಿಕೊಳ್ಳಬೇಕು. ಇಂದಿನ ವಾಣಿಜ್ಯಯುಗದಲ್ಲಿ ಎಲ್ಲವೂ ವಾಣಿಜ್ಯವಾಗಿ ಪರಿಣಮಿಸುತ್ತಿದೆ. 'ಭಾರತದಲ್ಲಿ ದೇವಾಲಯ ವ್ಯಾಪಾರ ಅತಿದೊಡ್ಡ ವ್ಯಾಪಾರ'(*In India temple business is the biggest business*) ಎಂಬ ಹೇಳಿಕೆ ಹಾಸ್ಯೋಕ್ತಿಯಾಗಿ ಕಂಡರೂ ಅದರಲ್ಲಿ ಬಹಳ ಸತ್ಯಾಂಶವಿದೆ. ದೇವಾಲಯಗಳು ಪಾವಿತ್ರ್ಯ ಶಾಂತಿಗಳ ತಾಣವಾಗಿರಬೇಕು. ಅಲ್ಲಿಗೆ ಬರುವವರಿಗೆ ಸ್ವಾಭಾವಿಕವಾಗಿಯೇ ಭಕ್ತಿಯ ಭಾವ ಕೆರಳುವಂತಾಗಬೇಕು, ಶಾಂತವಾಗಿ ಕುಳಿತು ಭಗವಚ್ಚಿಂತನೆಯನ್ನು ಮಾಡಲು ಪ್ರೇರಕವಾಗಿರಬೇಕು.

ಪೂಜಾರಿ ವರ್ಗದವರ, ದೇವಾಲಯಕ್ಕೆ ಬರುವ ಭಕ್ತರ ಭಕ್ತಿಭಾವದಿಂದ ದೇವಾಲಯದಲ್ಲಿ ಭಗವಂತನ ಪ್ರತಿಷ್ಠಾಪನೆಯಾಗುವುದು, ಕೇವಲ ವಿಗ್ರಹಪ್ರತಿಷ್ಠಾಪನೆಯಿಂದಲ್ಲ. ವಿಗ್ರಹದಲ್ಲಾಗುವ ಭಗವದಾವಿರ್ಭಾವವನ್ನು ಅರ್ಚಾವತಾರ ಎಂದು ಕರೆಯುತ್ತಾರೆ. ಭಕ್ತಿಯ ಅರ್ಚನೆಯಾದರೆ ವಿಗ್ರಹದಲ್ಲಿ ಭಗವತ್ ಶಕ್ತಿಯ ಅವತರಣವಾಗುತ್ತದೆ. ಆಗಲೇ ಗುಡಿ 'ದೇವರ ಆಲಯ' ವಾಗುವುದು. ಇಲ್ಲದಿದ್ದರೆ ಅದು ಒಂದು ಕೇವಲ ಕಟ್ಟಡ ಅಥವಾ ಒಂದು ಸುಂದರ ಶಿಲ್ಪಕಲಾಕೃತಿ. ಶ್ರೀರಾಮಕೃಷ್ಣರು ತಮ್ಮ ಭಕ್ತಿಭಾವ ಪೂರಿತ ಅರ್ಚನೆಯ ಮೂಲಕ ಶಿಲಾಮೂರ್ತಿಯನ್ನು ಚಿನ್ಮಯಗೊಳಿಸಿದರು. ದೇವಾಲಯದ ಪೂಜಾರಿಗಳೆಲ್ಲರೂ ಶ್ರೀರಾಮಕೃಷ್ಣರಂತೆ ಆದರ್ಶ ಅರ್ಚಕರಾಗಲು ಪ್ರಯತ್ನಿಸಬೇಕು.ಆಗ ದೇವಾಲಯ ನಿಜವಾಗಿಯೂ ದೇವರ ಸ್ಥಾನವಾಗುತ್ತದೆ ಹಾಗೂ ಶಾಂತಿ ಪಾವಿತ್ರ್ಯ ತಾಣವಾಗುತ್ತದೆ.

ಪ್ರಾಚೀನ ದೇವಾಲಯಗಳ ವೈವಿಧ್ಯಮಯ ರಚನೆಗಳು ಬೃಹತ್ ಪ್ರಮಾಣದ ಕಟ್ಟಡದ ವಿನ್ಯಾಸ, ಅದ್ಭುತವಾದ ಶಿಲ್ಪಕಲಾ ಸಾಮರ್ಥ್ಯದ ಸ್ಮಾರಕಗಳು ಮಾತ್ರವಲ್ಲದೆ ಅವುಗಳ ಹಿನ್ನೆಲೆಯಲ್ಲಿ, ಧಾರ್ಮಿಕ, ನೈತಿಕ ಹಾಗೂ ಆಚಾರ-ವಿಚಾರಗಳು ಸಾಂಕೇತಿಕವಾಗಿ ಅಡಗಿರುವುದನ್ನು ಕಾಣಬಹುದು. ಸೂಕ್ಷ್ಮಗ್ರಾಹಿಗಳು ಈ ಸಂಕೇತಗಳನ್ನು ಸೋದಾಹರಣವಾಗಿ ಅರ್ಥೈಸಬಲ್ಲರು. ಇಂಥ ಸಂಕೇತಗಳು ವಿಶ್ವದ ಎಲ್ಲ ಧರ್ಮಗಳ ಆಚರಣೆ, ಪದ್ಧತಿ, ದೇವಾಲಯಗಳಲ್ಲೂ ಕಂಡುಬರುತ್ತವೆ. ❖

> ಎಲ್ಲ ಧರ್ಮಗಳಲ್ಲಿಯೂ ಅಡಗಿರುವ ಮಹಾಸತ್ಯಗಳನ್ನು ಜನರಿಗೆ ಮನಮುಟ್ಟುವಂತೆ ತಿಳಿಸುವುದಕ್ಕಾಗಿ ಅನಾದಿಕಾಲದಿಂದಲೂ ಸಂಕೇತಗಳು ಬಳಸಲ್ಪಟ್ಟಿವೆ.......ಈ ವಿಶ್ವದಲ್ಲಿರುವ ಪ್ರತಿಯೊಂದನ್ನೂ ಒಂದು ಸಂಕೇತವೆಂದು ಭಾವಿಸಬಹುದು. ಈ ಜಗತ್ತೆಲ್ಲ ಒಂದು ಸಂಕೇತ ಮತ್ತು ಈಶ್ವರನು ಅದರ ಹಿನ್ನೆಲೆಯಲ್ಲಿರುವ ಸಾರ.
>
> ಸ್ವಾಮಿ ವಿವೇಕಾನಂದ